# The Thematic Diversity in Amuge Rayamma's Vachanas

## ಅಮುಗೆ ರಾಯಮ್ಮನ ವಚನಗಳ ವಸ್ತು ವೈವಿಧ್ಯತೆ

**ಪ್ರೊ.ಎಂ.ಲಿಂಗಪ್ಪ ಗೋನಾಲ**

ಮುಖ್ಯಸ್ಥರು
ಕನ್ನಡ ವಿಭಾಗ
ಉಸ್ಮಾನಿಯಾ ವಿಶ್ವವಿದ್ಯಾಲಯ
ಹೈದರಾಬಾದ್–500007
(ಮೊ) 9440784003

**ಸಾರಾಂಶ:**

ಹನ್ನೆರಡನೆಯ ಶತಮನದ ಪ್ರಮುಖ ಮಹಿಳಾ ವಚನಕಾರ್ತಿಯಾದ ಅಮುಗೆ ರಾಯಮ್ಮಳ ಜೀವನ ಮತ್ತು ಅವಳ ವಚನಗಳಲ್ಲಿ ವ್ಯಕ್ತವಾಗಿರುವ ಪ್ರಮುಖ ವಿಚರಗಳನ್ನು ಈ ಲೇಖನದಲ್ಲಿ ಮಂಡಿಸಲಾಗಿದೆ. ಅಮುಗೇಶ್ವರಲಿಂಗ ಅಂಕಿತದಿಂದ ಸಿಕ್ಕಿರುವ ಒಟ್ಟು 116 ವಚನಗಳನ್ನು ಸಮಗ್ರ ವಚನ ಸಂಪುಟ–5 ರಲ್ಲಿ ಸಂಕಲಿಸಲಾಗಿದೆ. ಇವುಗಳನ್ನೇ ಇಟ್ಟುಕೊಂಡು ಇವುಗಳಲ್ಲಿ ವ್ಯಕ್ತವಾಗಿರುವ ವಸ್ತು–ವಿಷಯದ ಕುರಿತು ವಿವೇಚಿಸಲಾಗಿದೆ. ಬಹು ವಿಶೇಷವಾದ ಸಂಗತಿಗಳನ್ನು ಕುರಿತು ನಿಖರವಾಗಿ ತನ್ನ ವಿಚಾರಗಳನ್ನು ರಾಯಮ್ಮ ಮಂಡಿಸಿರುವಳು. ಅರಿವು, ಅನುಭಾವ, ಮಹಾನುಭವಿ ಜ್ಞಾನ, ಸಮ್ಯಜ್ಞಾನ, ಅಜ್ಞಾನ, ಸಮಾಜ ವಿಮರ್ಶೆ, ಸತಿಪತಿಭಾವ, ಗುರು, ಲಿಂಗ, ಜಂಗ, ಪಾದೋದಕ, ಪ್ರಸಾದ, ವಿರಕ್ತ ಇವುಗಳ ಮೌಲ್ಯ–ಅಪಮೌಲ್ಯ ಪರಧರ್ಮೀಯರ ನಿಂದನೆ, ಆತ್ಮಕಥನಾತ್ಮಕ ಸಂಗತಿಗಳು ಈ ಮುಂತಾದ ವಿಷಯಗಳನ್ನು ಕುರಿತು ಸ್ಪಷ್ಟವಾಗಿ ಖಚಿತವಾಗಿ, ನಿಷ್ಠುರವಾಗಿ, ವಿಮರ್ಶಾತ್ಮಕವಾಗಿ ಯಾವುದೇ ಬಿಡೆ ಇಲ್ಲದೆ ಮಾತಾಡಿದ್ದಾಳೆ. ಅವಳು ಹೇಳುವ ಕ್ರಮ ಸ್ವಲ್ಪ ಒರಟಾಗಿ, ಮೊನಚಾಗಿದೆ. ಮಧ್ಯಕಾಲೀನ ಕನ್ನಡ ಸಮಾಜದಲ್ಲಿದ್ದ ಸಾಮಾಜಿಕ ಸ್ಥಿತಿಗತಿ ಹೇಗಿತ್ತು ಎಂದು ತಿಳಿಯುವುದರೊಂದಿಗೆ, ಆ ಕಾಲಸಂದರ್ಭದ ಸಮಸ್ಯೆಗಳಿಗೆ ರಾಯಮ್ಮ ಹೇಗೆ ಪ್ರತಿಕ್ರಿಯಿಸಿದಳು. ಅವುಗಳಿಗೆ ಕಂಡುಕೊಂಡ ಪರಿಹಾರಗಳಾವುವು ಈ ಮುಂತಾದ ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಪ್ರಮುಖ ಪದ:**

ಅರಿವು,–ಅನುಭಾವ, ಮಹಾನುಭವಿ, ಜ್ಞಾನ, ಸಮ್ಯಗ್ ಜ್ಞಾನ, ಅಜ್ಞಾನ, ಸಮಾಜ ವಿಮರ್ಶೆ, ಸತಿ–ಪತಿಭಾವ, ಗುರು, ಲಿಂಗ, ಜಂಗ, ಪಾದೋದಕ, ಪ್ರಸಾದ, ವಿರಕ್ತ ಇವುಗಳ ಮೌಲ್ಯ–ಅಪಮೌಲ್ಯ ಪರಧರ್ಮೀಯರ ನಿಂದನೆ, ಆತ್ಮಕಥನಾತ್ಮಕ ಸಂಗತಿಗಳು ಪ್ರಮುಖವಾಗಿವೆ.

**ಪೀಠಿಕೆ**

ಹನ್ನೆರಡನೆಯ ಶತಮಾನದ ಶರಣರ ಜೀವನದ ಕುರಿತು ಅಧ್ಯಯನ ಮಾಡುವಾಗ ಕೆಲವು ಶರಣರ ವೈಯಕ್ತಿಕ ಮಾಹಿತಿಯ ಕೊರತೆಯುಂಟಾಗುವುದು. ಕೆಲವು ಶರಣರ ಕುರಿತು ಅಲ್ಪಸ್ವಲ್ಪ ಮಾಹಿತಿ ಸಿಗುವುದು. ಇನ್ನು ಕೆಲವರ ಕುರಿತು ಏನೂ ವಿವರಗಳು ಸಿಗುವುದಿಲ್ಲ. ಅದರಂತೆ ಅಮುಗೆ ರಾಯಮ್ಮನ ಕುರಿತು ನಮಗೆ ಅನೇಕ ದ್ವಂದ್ವತೆಗಳುಂಟಾಗುತ್ತವೆ. ರಾಯಮ್ಮ ಹೆಸರಿನವರು ಒಬ್ಬರಿಗಿಂತ ಹೆಚ್ಚು ಜನರಿರುವುದು ತಿಳಿದು ಬರುತ್ತದೆ. ಅವರು ಯಾರೆಂದರೆ ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ ಮತ್ತು ಅಮುಗೆ ದೇವಯ್ಯಗಳ ಪುಣ್ಯಸ್ತ್ರೀ ರಾಯಮ್ಮ. ಇವರಿಬ್ಬರೂ 'ಅಮುಗೇಶ್ವರಲಿಂಗ' ಅಂಕಿತದಲ್ಲಿ ವಚನಗಳನ್ನು ಬರೆದದ್ದು ತಿಳಿದು ಬರುತ್ತದೆ. ರಾಯಸದ ಮಂಚಣ್ಣಗಳ ಸತಿ ರಾಯಮ್ಮಳ ಒಂದು ವಚನ ಲಭ್ಯವಾಗಿದೆ. ಅದು ಕೂಡ ಅಮುಗೆ ದೇವಯ್ಯಗಳ ಸತಿ ರಾಯಮ್ಮನ

ವಚನವೇ ಆಗಿದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಆದ್ದರಿಂದ ಈ ಲೇಖನದಲ್ಲಿ ಅಮುಗೆ ದೇವಯ್ಯಗಳ ಸತಿಯಾದ ರಾಯಮ್ಮಳನ್ನು ಕುರಿತು ಮತ್ತು ಅವಳ 116 ವಚನಗಳ ವಸ್ತು ವಿಷಯವನ್ನು ಕುರಿತು ಚರ್ಚಿಸುವುದೇ ಮುಖ್ಯ ಉದ್ದೇಶವಾಗಿದೆ.

**ಅಮುಗೆ ರಾಯಮ್ಮನ ಇತಿವೃತ್ತಿ:**

ವೀರಶೈವ ಕಾವ್ಯ ಪುರಾಣಗಳಲ್ಲಿ ನಿರೂಪಿತವಾಗಿರುವ ಪವಾಡ ಕಥೆಯಲ್ಲಿ ಬರುವಂತೆ, ಅಮುಗೆ ರಾಯಮ್ಮಳ ಸ್ಥಳ ಸೊನ್ನಲಾಪುರ. ಅಮುಗೆ ದೇವಯ್ಯ ಮತ್ತು ರಾಯಮ್ಮರು ನೆಯ್ಗೆಯ ಕಾಯಕವನ್ನು ಮಾಡಿಕೊಂಡಿದ್ದರು. ಸಿದ್ಧರಾಮನು ಕಪಿಲಸಿದ್ಧಮಲ್ಲಿನಾಥನ ಪರ್ವದಾಚರಣೆಗಾಗಿ ಊರಿನವರಿಗೆಲ್ಲ ಭತ್ತ ಕುಟ್ಟಲು ಭತ್ತವನ್ನು ನೀಡಿದ. ಏಕಲಿಂಗೋಪಾಸಕರಾಗಿದ್ದ ಅಮುಗೆ ರಾಯಮ್ಮ ಮತ್ತು ದೇವಯ್ಯ ಲಿಂಗವಿಲ್ಲದ ಭವಿಯ ಸೇವೆ ಮಾಡುವುದಿಲ್ಲವೆಂದು, ಸಿದ್ಧರಾಮನು ಕಳುಹಿಸಿದ ಭತ್ತವನ್ನು ಕುಟ್ಟುವುದಿಲ್ಲವೆಂದು ತಿಸ್ಕರಿಸಿದರು. ಇವರ ಈ ಪ್ರತಿಕ್ರಿಯೆಯಿಂದ ಸಿದ್ಧರಾಮ ಕೋಪಿಸಿಕೊಂಡು, ಅವರನ್ನು ಊರು ಬಿಟ್ಟು ಹೋಗಬೇಕೆಂದು ಕಟ್ಟಪ್ಪಣೆ ಮಾಡಿದ. ಇದಕ್ಕೆ ಅವರು ಭಯಪಡದೆ, ತಮ್ಮ ವಸ್ತುಗಳನ್ನೆಲ್ಲ ಮೂರು ಗಂಟುಗಳನ್ನಾಗಿಸಿದರು. ತಲಾ ಒಂದೊಂದು ಗಂಡ–ಹೆಂಡತಿ ಹೊತ್ತುಕೊಂಡರು. ಮೂರನೆಯದನ್ನು ಮಲ್ಲಿನಾಥನಿಗೆ ಹೊರಿಸಿಕೊಂಡು ಊರನ್ನು ಬಿಟ್ಟು ಹೋದರು. ಸಿದ್ಧರಾಮನಿಗೆ ಈ ಸಂಗತಿ ತಿಳಿಯುತ್ತದೆ. ಆಗ ಆತನು ಪಶ್ಚಾತ್ತಪದಿಂದ ದಂಪತಿಗಳಿಬ್ಬರನ್ನು ಮರಳಿ ಕರೆತರಲು ಹೇಳುವನು. ಆದರೆ ಅವರು ಮರಳಿ ಬರಲು ಒಪ್ಪದೆ, ಕಲ್ಯಾಣದ ಕಡೆ ಸಾಗಿ ಹೋದರು. ಕಲ್ಯಾಣದ ಅನುಭವಮಂಟಪದಲ್ಲಿ ಪಾಲ್ಗೊಂಡರು. ತಮ್ಮ ಕಾಯಕ ನಿಷ್ಠೆ, ಲಿಂಗನಿಷ್ಠೆಯಿಂದ ಬದುಕನ್ನು ನಡೆಸಿದರು. ಕಲ್ಯಾಣದ ಕ್ರಾಂತಿ ಆದ ಮೇಲೆ ಪುಳಜೆ ಅನ್ನುವ ಗ್ರಾಮಕ್ಕೆ ಹೋಗಿ ನೆಲಸಿ, ಅಲ್ಲಿಯೇ ತಮ್ಮ ಕೊನೆಯ ಬದುಕನ್ನು ಕಳೆದು ಲಿಂಗೈಕ್ಯರಾದರೆಂದು ತಿಳಿದು ಬರುತ್ತದೆ.

ಸಿದ್ಧರಾಮನು ತನ್ನ ವಚನದಲ್ಲಿ ಇವರನ್ನು ಸ್ಮರಿಸಿರುವನು. ‘‘ನಿಷ್ಠಾ ಮಹೇಶ್ವರನೆನಿಪ ಅಮುಗೆ ದೇವಯ್ಯಗಳಿಂದ ಪ್ರಭುದೇವರೆಂಬ ಅನಾದಿ ಜಂಗಮವ ಕಂಡೆ’’ ಎಂದಿದ್ದಾನೆ. ಇದರಿಂದ ತಿಳಿದು ಬರುವುದೇನಂದರೆ, ಸಿದ್ಧರಾಮನು ಕಲ್ಯಾಣಕ್ಕೆ ಬರುವುದಕ್ಕಿಂತ ಮುಂಚಿತವಾಗಿಯೇ ಈ ದಂಪತಿಗಳು ಅಲ್ಲಿದ್ದರು. ಸಿದ್ಧರಾಮನು ಕಲ್ಯಾಣಕ್ಕೆ ಬಂದಾಗ ಆತನನ್ನು ಅಲ್ಲಮಪ್ರಭುವಿಗೆ ಇವರೆ ಪರಿಚಯಿಸಿದರೆಂದು, ಈ ಮೇಲಿನ ಮಾತಿನಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಅಮುಗೆ ರಾಯಮ್ಮ ಸಿದ್ಧರಾಮ ಮತ್ತು ಅಲ್ಲಮರ ಸಮಕಾಲೀನಳೆಂದು ಸ್ಪಷ್ಟವಾಗುತ್ತದೆ.

**ಅಮುಗೆ ರಾಯಮ್ಮನ ವಚನಗಳ ವಸ್ತು ವೈವಿಧ್ಯತೆ**

ಅಮುಗೇಶ್ವರಲಿಂಗ ಅಂಕಿತದಿಂದ ಸಿಕ್ಕಿರುವ ಒಟ್ಟು 116 ವಚನಗಳನ್ನು ಸಮಗ್ರ ವಚನ ಸಂಪುಟ–5 ರಲ್ಲಿ ಸಂಕಲಿಸಲಾಗಿದೆ. ಇವುಗಳನ್ನೇ ಇಟ್ಟುಕೊಂಡು ಇವುಗಳಲ್ಲಿ ವ್ಯಕ್ತವಾಗಿರುವ ವಸ್ತು–ವಿಷಯದ ಕುರಿತು ವಿವೇಚಿಸಲಾಗಿದೆ. ಬಹು ವಿಶೇಷವಾದ ಸಂಗತಿಗಳನ್ನು ಕುರಿತು ನಿಖರವಾಗಿ ತನ್ನ ವಿಚಾರಗಳನ್ನು ರಾಯಮ್ಮ ಮಂಡಿಸಿರುವಳು. ಅರಿವು, ಅನುಭಾವ, ಮಹಾನುಭವಿ ಜ್ಞಾನ, ಸಮ್ಯಜ್ಞಾನ, ಅಜ್ಞಾನ, ಸಮಾಜ ವಿಮರ್ಶೆ, ಸತಿ–ಪತಿಭಾವ, ಗುರು, ಲಿಂಗ, ಜಂಗ, ಪಾದೋದಕ, ಪ್ರಸಾದ, ವಿರಕ್ತ ಇವುಗಳ ಮೌಲ್ಯ–ಅಪಮೌಲ್ಯ ಪರಧರ್ಮೀಯರ ನಿಂದನೆ, ಆತ್ಮಕಥನಾತ್ಮಕ ಸಂಗತಿಗಳು ಈ ಮುಂತಾದ ವಿಷಯಗಳನ್ನು ಕುರಿತು ಸ್ಪಷ್ಟವಾಗಿ ಖಚಿತವಾಗಿ, ನಿಷ್ಠುರವಾಗಿ, ವಿಮರ್ಶಾತ್ಮಕವಾಗಿ ಯಾವುದೇ ಬಿಡೆ ಇಲ್ಲದೆ ಮಾತಾಡಿದ್ದಾಳೆ. ಅವಳು ಹೇಳುವ ಕ್ರಮ ಸ್ವಲ್ಪ ಒರಟಾಗಿ, ಮೊನಚಾಗಿದೆ.

ರಾಯಮ್ಮಳ ವಚನಗಳಲ್ಲಿ ಅನೇಕ ಸಂಗತಿಗಳು ನಿರೂಪಿತವಾಗಿವೆ. ಅರಿವು, ಆಚಾರ, ಅನುಭಾವ, ಅನುಭಾವಿ, ಮಹಾಜ್ಞಾನಿ, ಜ್ಞಾನಿ, ಸಮ್ಯಗ್ ಜ್ಞಾನಿ ಈ ಪರಿಭಾಷೆಗಳಲ್ಲಿ ಆಧ್ಯಾತ್ಮಿಕತೆಯನ್ನು ಕುರಿತು ತರ್ಕಿಸಿರುವಳು. ಸಮಾಜ ವಿಮರ್ಶೆಯಲ್ಲಿ ನಿಷ್ಠುರತೆ, ಡಾಂಭಿಕರ, ವೇಷಧಾರಿಗಳ, ಕಪಟಿಗಳ, ಕರ್ಮಿಗಳ ಅಜ್ಞಾನಿಗಳ ಕುರಿತು ಕಟುವಾಗಿಯೇ ಟೀಕಿಸಿರುವಳು. ಆತ್ಮನಿವೇದನೆಯಲ್ಲಿ ತನ್ನ ಬದುಕಿನ ಸಂಗತಿಗಳನ್ನು ಹೇಳುವ ಪ್ರಯತ್ನ ಮಾಡಿರುವಳು. ಅನೇಕ ಸಾಹಿತ್ಯಿಕ ಸಂಗತಿಗಳ ಅವಳ ವಚನಗಳಲ್ಲಿ ಕಾಣುತ್ತೇವೆ. ಮನುಷ್ಯ ಸ್ವಭಾವವನ್ನು ಕುರಿತು ಹೇಳುವಾಗ ಪಶು, ಪ್ರಾಣಿ, ಪಕ್ಷಿ, ಕ್ರಿಮಿ–ಕೀಟಗಳಿಗೆ ಆರೋಪಿಸಿ ಹೇಳಿರುವಳು. ‘‘ಅವಳು ಬಳಸುವ ಕೆಲವು ಸುಂದರ ಸೂತ್ರಬದ್ಧ ವಾಕ್ಯಗಳು, ಗಾದೆ, ನುಡಿಗಟ್ಟುಗಳು ವಚನಗಳಿಗೆ ಧ್ವನಿಪೂರ್ಣತೆಯನ್ನು ವಿಶೇಷ ಸತ್ವವನ್ನು ತಂದುಕೊಟ್ಟಿವೆ’’ (ಪು.42, ಸವಸಂ–5) ಎಂಬ ಮಾತಿಗೆ ಅವಳ ವಚನಗಳೇ ನಿದರ್ಶನವಾಗಿವೆ. ಉದಾಹರಣೆಗೆ:

> ಕಾದಹಾಲ ನೊಣ ಮುಟ್ಟಬಹುದೆ?,
> ಉತ್ತಮ ತೇಜಿಗೆ ಚಬುಕಿನಲ್ಲಿ ತೆಗೆವರುಂಟೆ?,
> ಆಕಾಶಕ್ಕೆ ಹಾರುವಂಗೆ ದೋಟಿಯಕೋಲ ಹಂಗೇತಕಯ್ಯ?,
> ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?

ಸೀಳನಾಯಿ ಸಿಂಹದ ಮರಿಯಾಗಬಲ್ಲುದೆ?

ಹೀಗೆ ರಾಯಮ್ಮನ ಅವಳ ವ್ಯಕ್ತಿ ವಿಶೇಷವೆನಿಸಿದ ಕೆಚ್ಚು, ಧೈರ್ಯ, ಛಲ, ನಿಷ್ಠುರತೆಗಳನ್ನು ಹೆಚ್ಚಾಗಿ ಮೈಗೂಡಿಸಿಕೊಂಡ ಶರಣೆಯರ ವಚನಗಳಲ್ಲಿ ಪ್ರತ್ಯೇಕತೆಯನ್ನು ಮೆರೆಯುತ್ತವೆ'' (ಪು.42, ಪ್ರಸ್ತಾವನೆ ಸವಸಂ–5) ಎಂಬುವ ಮಾತು ಅವಳ ವಚನಗಳ ಒಟ್ಟಾರೆಯ ಆಶಯವನ್ನು ಸೂಚಿಸುತ್ತದೆ.

**ಅರಿವು, ಅನುಭಾವ, ಮಹಾನುಭಾವಿ, ಜ್ಞಾನ, ಸಮ್ಯಗ್‌ಜ್ಞಾನ:**

ಅರಿವು, ಅನುಭಾವ, ಮಹಾನುಭಾವಿ, ಜ್ಞಾನ, ಸಮ್ಯಜ್ಞಾನ ಈ ಮುಂತಾದ ಪರಿಭಾಷೆಗಳನ್ನು ಗಮನಿಸಿದಾಗ, ಇವೆಲ್ಲ ಆಧ್ಯಾತ್ಮಿಕತೆಗೆ ಸಂಬಂಧಿಸಿದವು. ಶರಣರು, ದಾಸರು, ಸಂತರು ಮತ್ತು ಸೂಫಿಗಳು ಈ ವಿಷಯದಲ್ಲಿ ಸಾಕಷ್ಟು ವಿವೇಚನೆ ಮಾಡಿರುವರು. ಆಧ್ಯಾತ್ಮವು ಅಂತರಂಗಕ್ಕೆ ಸಂಬಂಧಿಸಿದ್ದು. ಇದು ಕಣ್ಣಿಗೆ ಕಾಣುವಂತಹದ್ದಲ್ಲ. ಅಮೂರ್ತವಾಗಿದ್ದರೂ ಸಂಸ್ಕಾರರೂಪದಲ್ಲಿ ಮೂರ್ತಗೊಳ್ಳುವುದು. ಅದರಂತೆ ಶರಣೆ ಅಮುಗೆ ರಾಯಮ್ಮಳು ತನ್ನ ವಚನಗಳಲ್ಲಿ ಕ್ರಮವಾಗಿ ಆಧ್ಯಾತ್ಮಕ್ಕೆ ಸಂಬಂಧಿಸಿದ ಸಂಗತಿಗಳನ್ನು ಘಹನವಾಗಿ ಚಿಂತಿಸಿರುವಳು.

ಅರಿವು ಎಂಬುದು ತಿಳಿವು ಅಥವಾ ಅತ್ಮಜ್ಯೋತಿ. ಅಂತರಂಗದ ಬೆಳಕು. ಆ ಬೆಳಕಿನಲ್ಲಿ ಜಗತ್ತಿನ ಅಜ್ಞಾನವೆಂಬ ಕತ್ತಲೆಯನ್ನು ನೀಗಿಸುವ ಪ್ರಭೆಯೇ ಅರಿವು. ಇದು ಎಲ್ಲರಲ್ಲೂ ಇರುವುದು. ಅದನ್ನು ಕಾಣುವ, ಪಡೆಯುವ, ನಡೆಯುವ ಅಂತಃಚಕ್ಷು ಬೇಕು. ಅರಿದ ಬಳಿಕ ಗರುಡಿಯ ಹೋಗಲೇತಕ್ಕೆ? (ಪು.188, ಸವಸಂ–5), ಅರಿಯಬಲ್ಲಡೆ ವಿರಕ್ತನೆಂಬೆನು (ಪು.188. ಸವಸಂ–5), ಅರಿವು ಆಚಾರವುಳ್ಳ ಸಮ್ಯಜ್ಞಾನಿಗೆ ಹೇಳುವೆನಲ್ಲದೆ, ಜಗದಲ್ಲಿ ನಡೆವ ಜಂಗುಳಿಗಳಿಗೆ ನಾ ಹೇಳುವುದಿಲ್ಲ. (ಪು.188, ಸವಸಂ–5), ಅರಿವು ಉಳ್ಳವರು ನೀವು ಅರಿಯದವರೊಡನೆ ನುಡಿಯದಿರಿ. (ಪು.189, ಸವಸಂ–5), ಅರಿವು ಸಂಬಂಧವುಳ್ಳ ಪರಿಪೂರ್ಣಜ್ಞಾನಿಗಳ ಅಡಿಗಳಿಗೆ ನಾನೆರಗುವೆನಯ್ಯಾ. (ಪು189, ಸವಸಂ–5), ಅರೆಯ ಮೇಲೆ ಮಳೆ ಹೊಯಿದಂತೆ, ಅರಿವುಳ್ಳವರಲ್ಲಿ ಅಗಮ್ಯವುಂಟೆ? (ಪು.190, ಸವಸಂ–5), ತನ್ನ ತಾನರಿಯದವಂಗೆ ಬಿನ್ನಾಣಿಗಳ ಮಾತೇತಕಯ್ಯಾ? (ಪು.190, ಸವಸಂ–5) ಹೀಗೆ ಅರಿವು ಎಂಬುದನ್ನು ತಿಳಿವು, ಜ್ಞಾನ ಎಂಬ ಅರ್ಥದಲ್ಲಿ ಅಮುಗೆ ರಾಯಮ್ಮ ಬಳಸಿರುವಳು.

ಅರಿವು–ಆಚಾರಗಳನ್ನು ಬಹಳ ನಿಖರವಾಗಿ ತರ್ಕಿಸಿರುವಳು. ಅರಿವೇ ಗುರುವು ಎನ್ನುವಂತೆ, ಅರಿವು ಎಂದರೇನು? ಅರಿವಿನ ಅರ್ಥ, ಅದರ ಸ್ವರೂಪ, ಮಹತ್ವವನ್ನು ತಿಳಿಸಿರುವಳು. ಅರಿವುಳ್ಳವರ ವ್ಯಕ್ತಿತ್ವದ ಎತ್ತರವನ್ನು, ಅರಿವಿಲ್ಲದವರನ್ನು ಅಜ್ಞಾನಿಗಳೆಂದು ವ್ಯಾಖ್ಯಾನಿಸಿರುವಳು. ಅರಿವು ಎಂದರೆ ತಿಳಿವು, ಜ್ಞಾನ, ಬೆಳಕು ಎಂಬ ಅರ್ಥದಲ್ಲಿ ಬಳಸಲಾಗಿದೆ. ಜಡತೆ ಮತ್ತು ನಿರ್ದಿಷ್ಟ ರೂಪ ಆಕಾರವನ್ನು ಅರಿವುಳ್ಳವರಲ್ಲಿ ಕಾಣಲು ಸಾಧ್ಯವಿಲ್ಲ. ಅದಕ್ಕೆ ಕೊನೆಯೆಂಬುದಿಲ್ಲ. ಕಲ್ಲಿನ ಮೇಲೆ ಸುರಿದ ಮಳೆಯ ನೀರಿನಂತೆ, ಅದು ಯಾವುದೇ ಕಡೆ ನಿಲ್ಲದು. ಗಾಳಿಗೆ ಆಕಾರ ರೂಪವಿಲ್ಲ. ಎಲ್ಲ ಸಂಬಂಧಗಳನ್ನು ತಿಳಿದ ಶರಣನನ್ನು ಕಣ್ಣಿನಿಂದ ನೋಡಲು ಸಾಧ್ಯವೇ. ತಿಪ್ಪೆಯ ಮೇಲಿನ ಬಟ್ಟೆ ಸುಟ್ಟರೆ ಅದು ಹೇಗೆ ಭಸ್ಮವಾಗಿ ಇಲ್ಲದಂತಾಗುತ್ತದೆ. ಅದರಂತೆ ಅನುಭಾವಿಯಾದವನು ಇರಬೇಕಂತೆ. ಕೇವಲ ತಮ್ಮ ಆತ್ಮತೇಜಕ್ಕಾಗಿ ಹೋರಾಡುವ ಘಾತಕರನ್ನು ನಿಜ ವಿರಕ್ತರು ಎನ್ನಲಾಗದು ಎಂದಿರುವಳು.

ಅರಿತವನೇ ವಿರಕ್ತನಾಗುವನು. ಯಾವುದೇ ಸ್ತುತಿ–ನಿಂದನೆಗೆ ಹೊರಗಾಗಿರಬೇಕು. ಘನತತ್ವವನರಿದು ''ಶಿಶುಕಂಡ ಕನಸಿನಂತೆ ಇದ್ದವರನ್ನು ಶಿವಜ್ಞಾನಿ'' ಎಂದು ಕರೆದಿರುವಳು. ಅರಿವು ಆಚಾರಗಳನ್ನು ಉಳ್ಳವರಿಗೆ ಬಹಳ ಗೌರವವನ್ನು ಕೊಡಲಾಗಿದೆ. ಆದ್ದರಿಂದ ರಾಯಮ್ಮ ಅರಿವುಳ್ಳವರನ್ನು ಉದ್ದೇಶಿಸಿಯೇ ಮಾತಾಡಿರುವಳು. ''ಅರಿವು ಆಚಾರವುಳ್ಳ ಸಮ್ಯಗ್ ಜ್ಞಾನಿಗೆ ಹೇಳುವೆನಲ್ಲದೆ, ಜಗದಲ್ಲಿ ನಡೆಯುವ ಜಂಗುಳಿಗಳಿಗೆ ನಾ ಹೇಳುವನಲ್ಲ''. (ಪು.188, ಸವಸಂ–5) ಅರಿವು–ಆಚಾರವುಳ್ಳವರನ್ನು ಸಮ್ಯಗ್ ಜ್ಞಾನಿಗಳೆಂದು ತೀರ್ಮಾನಿಸಿರುವಳು. ಜಗದಲ್ಲಿರುವ ಅಜ್ಞಾನಿಗಳನ್ನು ಜಂಗುಳಿಗಳು ಎಂದು ಕರೆದು, ಅವರಿಗೆ ಬೋಧಿಸುವುದಿಲ್ಲವೆಂದು ನಿರಾಕರಿಸಿದ್ದಾಳೆ. ಮುಂದುವರೆದು ಅರಿವುವುಳ್ಳವರಿಗೆ ಒಂದು ಕಿವಿಮಾತು ಹೇಳಿರುವುದಿದೆ. ಅದೇನಂದರೆ,

ಅರಿವು ಉಳ್ಳವರು ನೀವು ಅರಿಯದವರೊಡನೆ ನುಡಿಯದಿರಿ.
ಪೊಡವಿಯ ಶರಣರೆಂದು ನಿಮ್ಮ ಅರುವಿನ ಪ್ರಸಂಗವನುಸುರದಿರಿ.
ವೇಷಧಾರಿತರಾದವರ ಕಂಡು ನುಡಿಯದಿರಿ.
ಅಮುಗೇಶ್ವರನೆಂಬ ಲಿಂಗವನರಿದವರು. (ಪು.189, ಸವಸಂ–5)

ಜ್ಞಾನಿಗಳು ಅಜ್ಞಾನಿಗಳೊಂದಿಗೆ ಮಾತಾಡುವುದು ಶೋಭೆಯಾದದ್ದಲ್ಲ. ವೇಷಧಾರಿಗಳನ್ನು ಕಂಡು ಮಾತಾಡಬೇಡಿರಿ. ಶರಣರ ಅರಿವಿನ ಪ್ರಸಂಗವನ್ನು ಅವರಿಗೆ ಅರ್ಥವಾಗಿಸುವುದು ವ್ಯರ್ಥವೆಂದಿದ್ದಾಳೆ. ಅರಿವಿನ ಸಂಬಂಧವುಳ್ಳ ಪರಿಪೂರ್ಣಜ್ಞಾನಿಗಳ ಪಾದಗಳಿಗೆ

ತಾನು ಎರಗುವೆ ಎಂದಿರುವಳು. ಅಜ್ಞಾನಿಗಳಿಗೆ ಗೌರವ ತೋರುವುದು, ಅಜ್ಞಾನಿಗಳನ್ನು ನಿರ್ಲಕ್ಷ್ಯಿಸುವುದು ಅರಿವುಳ್ಳವರ ಧರ್ಮವೆಂಬುದು ಅವಳ ನಿಲುವು ಆಗಿದೆ.

ಅನುಭಾವದ ಕುರಿತು ಕೂಡ ವಚನಕಾರರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅನುಭಾವವನ್ನು ಕುರಿತು ಅಮುಗೆ ರಾಯಮ್ಮ ತನ್ನದೇ ಆದ ರೀತಿಯಲ್ಲಿ ಅರ್ಥೈಸಿರುವಳು. ಅನುಭವದಿಂದ ಅನುಭಾವ, ಅನುಭಾವವುಳ್ಳವನು ಅನುಭಾವಿ ಎನ್ನುವಂತೆ ಚರ್ಚೆಗಳಿವೆ. ಇದು ಅಧ್ಯಾತ್ಮಿಕತೆಗೆ ಸಂಬಂಧಿಸಿದ್ದು. ಅನುಭಾವವನ್ನು ಹೀಗೆ ಎಂದು ಅರ್ಥೈಸಲಾಗುವುದಿಲ್ಲ. ಅನುಭಾವಿಯಾದವನು ಲೋಕದ ಐಭೋಗದಿಂದ ನಿವೃತ್ತನಾಗಿರಬೇಕೆಂದು ರಾಯಮ್ಮ ಒತ್ತಾಯಿಸುವಳು. ಯಾರನ್ನು ಅನುಭಾವಿಗಳೆಂದು ಕರೆಯಲಾಗುವುದಿಲ್ಲ ಎನ್ನುವಲ್ಲಿ; ಅವುಗಳಿಲ್ಲದವರೇ ಅನುಭಾವಿಗಳೆಂದು ಪರೋಕ್ಷವಾಗಿ ಹೇಳಿರುವಳು.

ಜ್ಞಾನದ ವ್ಯಾಖ್ಯಾನವನ್ನು ಹೀಗೆ ಮಾಡಿರುವಳು. ಜ್ಞಾನವೆಂಬುದು ಬೀದಿಯ ಪಸರವೆ?, ಬೊಕ್ಕಣಕ್ಕೆ ತುಂಬುವ ಹುರುಳಿಯೆ?, ಸೋಲಿನ ಮಾತು ಬಂದಡೆ ಗೆಲ್ಲವ ನುಡಿಯದಿರಬೇಕು. ಅಂದರೆ ಜ್ಞಾನವು ಎಲ್ಲಿಬೇಕೆಂದರಲ್ಲಿ ಸಿಗದು. ಸಂಗ್ರಹಿಸಿಡುವ ಕಾಳುಕಡಿಯಲ್ಲ. ಅದನ್ನು ಎಲ್ಲರ ಮುಂದೆ ಹೇಳಿಕೊಂಡು ತಿರುಗುವುದಲ್ಲ. ಗೆಲುವು ಸೋಲಿನ ಮಾತು ಬಂದಾಗ ನಾನೇ ಗೆಲ್ಲುವೆ ಎಂಬ ಅಹಂಕಾರವನ್ನು ತೋರಬಾರದೆಂದು ಅನ್ನುವಲ್ಲಿ ಜ್ಞಾನ ಹೇಗಿರುತ್ತೆಂಬುದು ಅರ್ಥವಾಗುವುದು.

**ಅಮುಗೆ ರಾಯಮ್ಮ ವಚನಗಳಲ್ಲಿ ಸಮಾಜ ವಿಮರ್ಶೆ**

ಶರಣರ ವಚನಗಳನ್ನು ಗಮನಿಸಿದರೆ ಅವುಗಳಲ್ಲಿ ಅಂದಿನ ಸಮಾಜದ ಯಥಾವತ್ತಾದ ಚಿತ್ರಣವಿದೆ. ಸಮಾಜದ ಓರೆ–ಕೋರೆಗಳನ್ನು ಎತ್ತಿತೋರಿಸಿ, ಅವುಗಳನ್ನು ತಿದ್ದಲು ಪ್ರಯತ್ನಿಸಿರುವಳು. ಎಲ್ಲ ಕಾಲಕ್ಕೂ ಸಮಾಜದಲ್ಲಿ ಎಲ್ಲವೂ ಸರಿಯಾಗಿಯೇ ಇರುವುದೆಂದು ಹೇಳಲು ಬರುವುದಿಲ್ಲ. ಅದು ಕಾಲದಿಂದ ಕಾಲಕ್ಕೆ ಸಾಗಿಬರುತ್ತಲಿದೆ. ಜಾತಿವ್ಯವಸ್ಥೆ, ಅನಾಚಾರ, ವ್ರತಭ್ರಷ್ಟತೆ, ಅಂಧಶ್ರದ್ಧೆ ಇವುಗಳು ಸಮಾಜದ ಅಸಮಾನತೆಗೆ ಕಾರಣವಾಗಿದ್ದವು. ಪರಸ್ತ್ರೀ ವ್ಯಾಮೋಹ, ವೇಷಧಾರಿಗಳು, ಡಾಂಭಿಕರು, ವಂಚಕರು, ಅಜ್ಞಾನಿಗಳು, ಆಸೆಬುರುಕ ಈ ಮುಂತಾದ ಸ್ವಭಾವದ ಜನತೆಯು ಸಮಾಜದ ಪೀಡಕರಾಗಿದ್ದರು. ಇವರಿಂದ ಸಮಾಜಕ್ಕೆ ಹಾನಿಯಾಗುತ್ತಲಿತ್ತು. ಆದ್ದರಿಂದ ಅಮುಗೆ ರಾಯಮ್ಮ ಅವರ ಗುಣಸ್ವಭಾವವನ್ನು ಪಶುಪ್ರಾಣಿಪಕ್ಷಿಕ್ರಿಮಿಕೀಟಗಳಿಗೆ ಆರೋಪಿಸಿರುವಳು. ಅವರಿಂದ ಶೀಲವಂತರಾದವರು, ಆಚಾರವಂತರಾದವರು, ಗುಣವಂತರಾವರು, ಸಭ್ಯರು ದೂರವಿರಬೇಕೆಂದು ಕರೆ ನೀಡಿರುವಳು. ಇವರೆಲ್ಲ ಸಮಾಜಕ್ಕೆ ಹೇಗೆ ಹೊರೆಯಾಗುವರು. ಅವರಿಂದ ವ್ಯವಸ್ಥೆಗೆ ಹೇಗೆ ಧಕ್ಕೆಯಾಗುವುದೆಂಬುವುದನ್ನು ಒತ್ತೊತ್ತಿ ಹೇಳಿರುವಳು. ಅವಳ ವಚನಗಳನ್ನು ಓದುತ್ತಿದ್ದರೆ, ಆ ಕಾಲದ ಸಮಾಜ ನಮ್ಮ ಕಣ್ಣು ಮುಂದೆ ಬಂದು ನಿಲ್ಲುತ್ತದೆ.

ಅಂಗದ ಮೇಲೆ ಲಿಂಗವುಳ್ಳ ಮತ್ತು ಲಿಂಗವಿಲ್ಲದ ಎರಡು ಬಗೆಯ ಜನತೆಯು ಸಮಾಜದಲ್ಲಿ ಇದ್ದರೆಂದು ಅವಳ ವಚನಗಳಿಂದ ತಿಳಿದುಬರುತ್ತದೆ. ಒಂದು ಕಡೆ ಲಿಂಗವಿಲ್ಲದವರನ್ನು ಸಾರಾಸಗಟಾಗಿ ತಿರಸ್ಕರಿಸುವುದು. ಇನ್ನೊಂದು ಕಡೆ ಲಿಂಗವುಳ್ಳವರಿದ್ದರೂ ವ್ರತಭ್ರಷ್ಟರಾಗಿದ್ದರು. ಅಂಗದ ಮೇಲೆ ಲಿಂಗವುಳ್ಳವರಲ್ಲಿ ಜಾತಿ ನೋಡಬಾರದು. ಅವರನ್ನು ಸಹಜ ಭಕ್ತರೆಂದು, ಶಿವಭಕ್ತರೆಂದು, ಶೀಲವಂತರೆಂದು, ವ್ರತಚಾರಿಗಳೆಂದು, ವ್ರತಭ್ರಷ್ಟರೆಂದು ಅವರ ಕುಲಛಲವ ಕೇಳುವ ಅನಾಚಾರಿಗಳಲ್ಲಿ ನಾನು ಭಿಕ್ಷೆ ಬೇಡುವುದಿಲ್ಲವೆಂದಿರುವಳು. ಮದ್ಯ–ಮಾಂಸ ಸೇವಿಸುವವರು ಅನಾಚಾರಿಗಳು. ಯಾವ ಕುಲವಾದರೇನು ಅಂಗದ ಮೇಲೆ ಲಿಂಗವುಳ್ಳವರೆಲ್ಲ ಆಚಾರವುಳ್ಳವರೆಂದು ಒಪ್ಪುವುದಾಗಿ ಹೇಳಿರುವಲ್ಲಿ ದ್ವಂದ್ವತೆ ಕಂಡುಬರುತ್ತದೆ.

ಮಾಟ ಕೂಟ, ಮತ್ಸರಗಳು ನಿರಾಸೆಯುಳ್ಳವನಿಗೆ, ಮನಪರಿಣಾಮಿಗೆ ಇರಬಾರದು. ಸ್ತ್ರೀಯರನ್ನು ಬಯಸಿ ಅವರ ಹಿಂದೆ–ಮುಂದೆ ತಿರುಗುವುದು ಸರಿ ಅಲ್ಲವೆಂಬ ಸೂಕ್ಷ್ಮವನ್ನು ಸೂಚಿಸಿರುವಳು. ಹೊಟ್ಟೆ ಹೊರೆಯುವುದಕ್ಕಾಗಿ ವೇಷ ಮರೆಯಿಸಿಕೊಂಡು ಬದುಕುವ ವೇಷಧಾರಿಗಳನ್ನು ಕುರಿತು ಬಹಳ ಸಶಕ್ತವಾಗಿ, ಕನಿಷ್ಠ ಪಶು–ಪ್ರಾಣಿಗಳಿಗೆ ಹೋಲಿಸಿ ಮಂಗಳಾರತಿ ಮಾಡಿರುವಳು.

ಉದರ ಪೋಷಣಕ್ಕೆ ಗಿಡುಗಿಡುದಪ್ಪದೆ ತಿರುಗುವ ಕುನ್ನಿ
ಒಡೆಯನ ಗುರುತ ಬಲ್ಲುದೆ?
ಮಳೆಗಾಲದಲ್ಲಿ ಮೀನು ಮಿಡಿಚೆಯ ತಿಂಬ ನರಿ
ಕತ್ತಲೆಯ ಬಲ್ಲುದೆ?
ಸತ್ತ ಹಂದಿಯ ತಿಂಬ ನಾಯಿ
ಬೆಳದಿಂಗಳ ಬಲ್ಲುದೆ?
ಕರ್ತನನರಿಯದ ವೇಷಧಾರಿಗಳು
ಎಮ್ಮನೆತ್ತ ಬಲ್ಲರು ಅಮುಗೇಶ್ವರಾ ? (ಪು.192, ಸವಸಂ–5)

ಹೊಟ್ಟೆಪಾಡಿಗಾಗಿ ಅಲೆಯುತ್ತ ತಿರುಗುವ ನಾಯಿ, ಒಡೆಯನನ್ನು ಗುರುತಿಸಲಾರದು. ಮಳೆಗಾಲದಲ್ಲಿ ಮೀನು ಮಿಡಿಚೆಯನ್ನು ತಿಂದು ಕಾಲಕಳೆಯುವ ನರಿಯು ಕತ್ತಲೆಯನ್ನು ತಿಳಿಯಲಾರದು. ಸತ್ತ ಹಂದಿಯನ್ನು ತಿನ್ನುವ ನಾಯಿಯು ಬೆಳದಿಂಗಳ ಮಹತ್ವ ತಿಳಿಯಲಾರದು. ಸೃಷ್ಟಿಕರ್ತನನ್ನು ಅರ್ಥಮಾಡಿಕೊಳ್ಳದ ಈ ಮೇಲಿನ ಪಶುಪ್ರಾಣಿಗಳಂತೆ ಬಾಳುವ ಮನುಜರು ಅಮುಗೇಶ್ವರ ಲಿಂಗವನ್ನು ಅರಿತುಕೊಳ್ಳಲು ಸಾಧ್ಯವೇ? ಎಂದು ಪ್ರಶ್ನಿಸಿರುವಳು. ಡಾಂಭಿಕರು ವೇಷಧಾರಿಗಳು ಹೇಗೆ ವಂಚನೆ ಮಾಡಿ ಬಾಳನ್ನು ಸಾಗಿಸುವರು. ಅವರ ಗುಣಸ್ವಭಾವವನ್ನು ನಾಯಿಗೆ ಹೋಲಿಸಲಾಗಿದೆ.

ಒಡೆಯರ ಕಂಡಡೆ ಬಡಿವುದಯ್ಯ ಬಾಲವನು ಸುನಿ.
ಕೊಡುವ ಕೊಂಬುವರ ಕಂಡು ಅವರಡಿಗೆರಗುವರಯ್ಯಾ.
ಮೃಡನ ವೇಷವ ತೊಟ್ಟು
ಕುರಿಗಳಂತೆ ತಿರುಗುವ ಜಡಜೀವಿಗಳ ಕಂಡಡೆ
ಮೃಡನ ಶರಣರು ಮೋರೆಯನೆತ್ತಿ ನೋಡರು.
ಕಾಣಾ ಅಮುಗೇಶ್ವರಾ (ಪು.194, ಸವಸಂ–5)

ನಾಯಿಯಂತೆ ಕೊಡುವವರನ್ನು ಕಂಡು ಅವರ ಬೆನ್ನು ಹಿಂದೆ ಸುತ್ತುವ ಸೋಮಾರಿಗಳು, ಶಿವನ ವೇಷವನ್ನು ತೊಟ್ಟು ಕುರಿಗಳಂತೆ ತಿರುಗುವರು. ಅವರು ಜಡಜೀವಿಗಳು. ನಮ್ಮ ಶರಣರು ಅವರ ಮುಖವನ್ನು ನೋಡಲಾರರು ಎಂದಿರುವಳು. ಕಳುವು ಮಾಡುವ ಕಳ್ಳನು ಕಳುವು ಮಾಡುವೆನೆಂದು ಹೇಳಲಾರ. ಬೇರೆಯವರೊಂದಿಗೆ ಬಣ್ಣ ಬಣ್ಣದ ಮಾತಾಡಿ ಅಪ್ಪ ಅಣ್ಣ ಎನ್ನುವ ನಯವಂಚಕರನ್ನು ನಂಬಬಾರದೆಂದು, ಅಂಥವರನ್ನು ಕುನ್ನಿಗಳೆಂದು ರಾಯಮ್ಮ ಹೀಯಗಳೆದಿರುವಳು.

ಸಮಾಜದ ಮನುಜರಲ್ಲಿಯು ಉತ್ತಮ ಗುಣಸ್ವಭಾವದವರು ಮತ್ತು ದುರ್ಗುಣ ಸ್ವಭಾವದವರು ಇರುವರು. ಅವರವರ ನಡೆ, ನುಡಿ, ಗುಣ ಸ್ವಭಾವವನ್ನು ಪ್ರತಿನಿಧಿಸುವ ಪಶುಪ್ರಾಣಿಪಕ್ಷಿಕ್ರಿಮಿಕೀಟಗಳಿಗೆ ಹೋಲಿಸಿರುವಳು. ಉತ್ತಮ ಗುಣಕ್ಕೆ ಉತ್ತಮ ತೇಜಿ, ತೇಜಿಮರಿ, ಕುಂಜರ, ಕೋಗಿಲೆ, ಆನೆ, ಸಿಂಹದ ಮರಿ, ಕಸ್ತೂರಿಯ ಮೃಗ, ಮದಗಜ, ಇವುಗಳನ್ನು ಹೇಳುವಳು. ದುರ್ಗುಣ, ವಂಚಕರು, ವೇಷಧಾರಿಗಳು, ವಾಮಮಾರ್ಗಿಗಳು, ಅಜ್ಞಾನಿಗಳು, ಡಾಂಭಿಕರು, ಸೋಮಾರಿಗಳು ಹೀಗೆ ಈ ಮುಂತಾದ ಹೀನ ಗುಣದವರನ್ನು ಕುರಿತು ಹೇಳುವಾಗ ಕನಿಷ್ಠ ಪ್ರಾಣಿಗಳ ಗುಣ ಸ್ವಭಾವಕ್ಕೆ ಹೋಲಿಸಿರುವಳು. ಅವುಗಳೆಂದರೆ: ಕುನ್ನಿ, ಮೀನು, ಮಿಡಿಚೆ, ನರಿ, ನಾಯಿ, ಕತ್ತೆಯ ಮರಿ, ಹಂದಿ, ಆಡಿನಮರಿ, ಕಾಗೆಯಮರಿ, ಸೀಳನಾಯಿ, ನೋಣ, ಬೆಕ್ಕು, ಸರ್ಪ, ಕುರಿ, ಕೋಣ, ಕೊಡಗ, ಬಾಲಹುಳ, ಪಶು, ಬಳ್ಳು, ಬಿಸಿಲಕುದುರೆ, ಸತ್ತಕರು, ವರಹ, ಕುಕ್ಕುಟ, ಸೂಕರ, ಈ ಮುಂತಾದವುಗಳು.

ಪರಧರ್ಮೀಯರ ಅರ್ಥರಹಿತ ಆಚರಣೆಗಳನ್ನು ಖಂಡಿಸಿರುವಳು. ವಿರಕ್ತರೆಂದು ಹೇಳಿಕೊಂಡು, ಜಂಗಮರೆಂದು ಹೇಳಿಕೊಂಡು, ಗುರುವೆಂದು ಹೇಳಿಕೊಂಡು, ಜ್ಞಾನಿ, ಅನುಭಾವಿಗಳೆಂದು ಹೇಳಿಕೊಂಡು ಜನತೆಗೆ ಮೋಸ ಮಾಡಿ ಹೊಟ್ಟೆ ಹೊರೆಯುವವರನ್ನು ತರಾಟೆಗೆ ತೆಗೆದುಕೊಂಡಿರುವಳು.

ರಾಯಮ್ಮನ ವಚನಗಳು ತುಸು ಕಟುವಾಗಿವೆ. ಅಲ್ಲಲ್ಲಿ ಸಾಹಿತ್ಯಿಕ ಮೌಲ್ಯ ಮಿಂಚಿನಂತೆ ಹರಿದಿದೆ. ರೂಪಕ, ಪ್ರತಿಮೆ, ಅಲಂಕಾರಗಳನ್ನು, ಗಾದೆ, ನಾಣ್ನುಡಿಗಳನ್ನು ಬಳಸುವ ಮೂಲಕ ವಚನಗಳನ್ನು ಪರಿಣಾಕಾರಿಯಾಗಿಸಿರುವಳು. ಉದಾಹರಣೆಗೆ: ಅರೆಯ ಮೇಲೆ ಮಳೆ ಹೊಯಿದಂತೆ, ಉತ್ತಮ ತೇಜಿಗೆ ಚಬುಕಿನಲ್ಲಿ ತೆಗೆವರುಂಟೆ?, ಕತ್ತಲೆ ಮನೆಯಲ್ಲಿ ಸಕ್ಕರೆ ಸವಿದಂತಿರಬೇಕು. ಕನ್ನವನಿಕ್ಕುವ ಕಳ್ಳನು ಕನ್ನಗಳ್ಳನೆಂದು ಉಸುರುವನೆ?, ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?, ಕಿಚ್ಚಿನೊಳಗಣ ಗುಂಡ ಬೆಕ್ಕು ಮುಟ್ಟಬಲ್ಲುದೆ?, ಮರುಜವಣಿಯ ಕಡ್ಡಿ ಕೈಯಲ್ಲಿದ್ದವಂಗೆ ಸರ್ಪ ಕಡಿಯಬಲ್ಲುದೆ?, ಕೊಂಬಿನ ಕುರಿಯಂತೆ ಕೂಗಿದಡೇನು?, ಮೂಗಿಲ್ಲದವಂಗೆ ಕನ್ನಡಿಯ ತೋರಲೇಕೆ?, ಮೂಗ ಕಂಡ ಕನಸಿನಂತಿರಬೇಕು ಹೀಗೆ ಮುಂತಾದ ನುಡಿಗಟ್ಟುಗಳು ಓದುಗರ ಮನಸೆಳೆಯುತ್ತವೆ.

ಧಾರ್ಮಿಕ ಸಂಗತಿಗಳಾದ ಗುರು–ಲಿಂಗ–ಜಂಗಮ, ಪಾದೋದಕ, ಪ್ರಸಾದ, ಇವುಗಳನ್ನು ಕುರಿತು ಮಾತಾಡಿರುವಳು. ಹೆಣ್ಣು ಹೊನ್ನು ಮಣ್ಣು ಈ ಮೂರನ್ನು ಹಿಡಿದಿರುವುದರಿಂದ ಈ ಮೇಲೆ ಸೂಚಿಸಿದ ಧರ್ಮದ ಸಂಗತಿಗಳು ಲೌಕಿಕವಾದವು. ಆ ಕಾಲದಲ್ಲಿ ಧರ್ಮವು ಮಲೀನವಾಗುತ್ತಿರುವುದರ ಕುರಿತು ಅವಳಿಗೆ ಕಳವಳವಿದೆ. ಆದ್ಯರ ವಚನಗಳನ್ನು ಓದಿ ಅವುಗಳನ್ನು ಹೊಟ್ಟೆ ಹೊರೆಯುವ ಸಾಧನಗಳಂತೆ ಬಳಸುತ್ತಿದ್ದವರ ಕುರಿತು ಕೋಪವಿದೆ. ಸತಿ–ಪತಿಭಾವವಿದೆ. ಆತ್ಮಕಥನಾತ್ಮಕ ಶೈಲಿಯಿಂದ ವಚನಗಳಲ್ಲಿ ವೈಯಕ್ತಿ ಸಂಗತಿಗಳನ್ನು ದಾಖಲಿಸಿರುವಳು. ಹೀಗೆ ಅಮುಗೆ ರಾಯಮ್ಮ ಒಬ್ಬ ನಿಷ್ಠುರ, ಸಾಮಾಜಿಕ ಬದ್ಧತೆ, ಶಿಸ್ತುಪಾಲನೆ, ಧರ್ಮಮಾರ್ಗದ ಬದುಕು ನಡೆಸುವ ಕಡೆ ಅವಳ ನಿಲುವಿದೆ. ಹೀಗಾಗಿ ಅವಳ ಚಿಂತನೆಯು ಸಮಕಾಲೀನಕ್ಕೂ ಅನ್ವಯವಾಗುವಂತಿದೆ. ನಾವು ಇಂದು

ಶರಣರ ವಚನಗಳನ್ನು ಮತ್ತೆ ಮತ್ತೆ ಓದಿ ಮನನ ಮಾಡಿಕೊಂಡು, ಬದುಕಿನಲ್ಲಿ ಪಾಲನೆ ಮಾಡುವುದು ಅಗತ್ಯವಿದೆ. ಆ ನಿಟ್ಟಿನಲ್ಲಿ ನಾವೆಲ್ಲ ಪ್ರಯತ್ನಿಸೋಣ.

**ಟಿಪ್ಪಣಿ** : ಇಲ್ಲಿ ಬಳಸಿಕೊಂಡ ವಚನಗಳು ಮತ್ತು ಪುಟ ಸಂಖ್ಯೆಗಳು ಈ ಗ್ರಂಥದಲ್ಲಿಯವು.

ಶಿವಶರಣೆಯ ವಚನ ಸಂಪುಟ (ಸಂ) ಡಾ ವೀರಣ್ಣ ರಾಜೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1993